353 (682) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಗಿರುವ ಪ್ರಕರಣಗಳೆಷ್ಟು;

ಆ) ಇವುಗಳನ್ನು ಆರು ತಿಂಗಳಾದರೂ ಬದಲಾಯಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸುಟ್ಟು ಹೋದ ಟ್ರಾನ್ಸ್ ಾರ್ಮರ್‌ಗಳನ್ನು ಕೂಡಲೇ ಬದಲಿಸಿ ರೈತರಿಗೆ ಆಗುತ್ತಿರುವ ತೊಂದರೆಯನ್ನು ಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವ ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಬಿಜಾಪುರ ಜಿಲ್ಲೆಯಲ್ಲಿ 07ರ ಅಂತ್ಯಕ್ಕೆ ಬದಲಿಕೆಗಾಗಿ ಬಾಕಿ ಉಳಿದಿರುವ ವಿಫಲಗೊಂಡಿರುವ ಟ್ರಾ ್‌ಗಳ ಒಟ್ಟು ಸಂಖ್ಯೆ 391.

ಆ) ಆರು ತಿಂಗಳಾದ ಿಸದೇ ಇರುವ ಪ್ರಕರಣಗಳು ಯಾವುದೂ ಇರುವುದಿಲ್ಲ.

ಇ) ಮೊದಲ ಆದ್ಯತೆಯ ಮೇರೆಗೆ ಕುಡಿಯುವ ನೀರಿನ ಸ್ಥಾವರಗಳಿಗೆ ಹಾಗೂ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡುವ ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಬದಲಾಯಿಸಲಾಗುತ್ತಿದೆ.

ಹೆಸ್ಕಾಂನ ಬಿಜಾಪುರ ಮತ್ತು ಇಂಡಿ ವಿಭಾಗಗಳಿಗೆ ಇದುವರೆವಿಗೆ ಬಿಜಾಪುರದಲ್ಲಿರುವ ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರದಿಂದ ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿಪಡಿಸಿ ಸರಬರಾಜು ಮಾಡಲಾಗುತ್ತಿತ್ತು. ಈಗ ಇಂಡಿ ವಿಭಾಗಕ್ಕೆ ಪ್ರತ್ಯೇಕವಾದ ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಇಂಡಿ ವಿಭಾಗದಲ್ಲಿ ವಿಫಲಗೊಳ್ಳುವ ಟ್ರಾನ್ಸ್‌ಫಾರ್ಮರ್‌ಗಳನ್ನು ಇಂಡಿಯಲ್ಲಿರುವ ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರದಿಂದಲೇ ದುರಸ್ತಿಪಡಿಸಿ ಒದಗಿಸಲಾಗುತ್ತಿದೆ. ಈ ಕ್ರಮದಿಂದ ಜೂನ್–07ರ ತಿಂಗಳೊಂದರಲ್ಲಿಯೇ ಬಿಜಾಪುರ ಜಿಲ್ಲೆಯಲ್ಲಿ ಒಟ್ಟು 127 ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಲು ಸಾಧ್ಯವಾಗಿರುತ್ತದೆ. ಬಿಜಾಪುರ ಜಿಲ್ಲೆಯಲ್ಲಿ ಈಗ ಎರಡು ಟ್ರಾನ್ಸ್‌ಫಾರ್ಮರ್

ದುರಸ್ತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುವುದರಿಂದ, ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ ಕಾರ್ಯ ಈಗ ಚುರುಕುಗೊಂಡಿರುತ್ತದೆ.

355 (453) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2006–07 ಮತ್ತು 2007–08ನೇ ಸಾಲಿನಲ್ಲಿ ಮಂಜೂರು ಮಾಡಿರುವ 220, 110, 33 ಕೆ.ವಿ. ಉಪ ವಿತರಣೆ ಕೇಂದ್ರಗಳೆಷ್ಟು (ಜಿಲ್ಲಾವಾರು, ತಾಲ್ಲೂಕುವಾರು ಪಟ್ಟಿ ನೀಡುವುದು);

ಆ) ಮಂಜೂರಾಗಿರುವ ಈ ಉಪ ವಿತರಣೆ ಕೇಂದ್ರಗಳ ಕಾಮಗಾರಿಗಳು ಯಾವ ಹಂತದಲ್ಲಿವೇ;

ಇ) ಯಾವ ವರ್ಷ ಈ ಉಪ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು (ಜಿಲ್ಲಾವಾರು, ತಾಲ್ಲೂಕುವಾರು ಪಟ್ಟಿ ನೀಡುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ), ಆ) ಮತ್ತು ಇ) ರಾಜ್ಯದಲ್ಲಿ 2006–07 ಮತ್ತು 2007–08ರ ಜೂನ್ 2007ರ ಅಂತ್ಯದವರೆಗೆ ಮಂಜೂರಾದ 220 ಕೆ.ವಿ., 110 ಕೆ.ವಿ. ಮತ್ತು 33 ಕೆ.ವಿ. ವಿದ್ಯುತ್ ಉಪ ಕೇಂದ್ರಗಳ ಸಂಖ್ಯೆಗಳ ವಿವರಗಳು ಈ ಕೆಳಕಂಡಂತಿವೆ:–

ಕ್ರ.ಸಂ.	ವೋಲ್ಟೇಜ್	ಸಂಖ್ಯೆಗಳು
1	220 ಕೆ.ವಿ	13
2	110 ಕೆ.ವಿ.	55
3	33 ಕೆ.ವಿ	109
	ಒಟ್ಟು	177

ಕಾಮಗಾರಿಗಳ ಹಂತ ಮತ್ತು ಪ್ರಾರಂಭಿಸಲಾಗುವ ವರ್ಷದ ವಿವರಗಳೊಡನೆ ಜಿಲ್ಲಾವಾರು, ತಾಲ್ಲೂಕುವಾರು ಪಟ್ಟಿಯನ್ನು ಅನುಬಂಧದಲ್ಲಿ ಒದಗಿಸಿದೆ.